### ಮರಳಿ ಅರಳಿದ ಖುಷಿ

ಈಗ್ಗೆ ಒಂದೆರಡು ವರ್ಷಗಳ ಹಿಂದೆ ಕೊರೊನಾ ಅಪ್ಪಳಿಸಿದಾಗ ಕೆಲವು ಕನ್ನಡ ಪತ್ರಿಕೆಗಳು ನೆಲ ಕಚ್ಚಿದವು. ಕೆಲ ಪತ್ರಿಕೆಗಳು ತಡವರಿಸಿ ನಡೆದವು. ಈ ಕಾಲಘಟ್ಟದಲ್ಲಿ ಹಾಗೂ ನಂತರವೂ ವಾರವಾರವೂ ವಿಭಿನ್ನ ಅಂಕಣಗಳೊಂದಿಗೆ ಸುಧಾ ಶೋಭಿಸುತ್ತಿರುವುದು ಸಂತಸ ತಂದಿದೆ. ಜಾಲತಾಣದ ಮೂಲಕ ವಿದೇಶಗಳಲ್ಲಿರುವ ಕನ್ನಡಿಗರೂ ಓದುವುದು ಹೆಮ್ಮೆಯ ಸಂಗತಿ. ಇತ್ತೀಚೆಗೆ ನನ್ನ ಸ್ನೇಹಿತರೊಬ್ಬರು ಭಾರತಕ್ಕೆ ಬಂದಿದ್ದಾಗ ಅವರ ತಂದೆಯವರು ಪತ್ರಿಕೆಗಳನ್ನು ಓದಿದರೇನೆ ತೃಪ್ತಿ ಎಂದು ಹೇಳಿ ಹಳೆಯ ಸುಧಾ ಪತ್ರಿಕೆಗಳನ್ನು ತರಿಸಿಕೊಂಡಿದ್ದರು. ಬಹಳ ಹಿಂದೆ, ಅಂದರೆ 40–50 ವರ್ಷಗಳ ಹಿಂದೆ ಬರೆಯುವವರಿಗಾಗಿ ಸದಸ್ಯತ್ವ ಸಂಖ್ಯೆ ಕೊಡುತ್ತಿದ್ದರು. ನನ್ನ ಸಂಖ್ಯೆ 158 ಆಗಿದ್ದುದು ಇನ್ನೂ ಮನದಲ್ಲಿದೆ.

—ಪಿ.ಎನ್. ಶ್ರೀವತ್ಸ, ಬೆಂಗಳೂರು



### ‘ಸುಧಾ’ ಎಂಬ ಅಭಿಮಾನ

ಸುಧಾ ಅಭಿಮಾನಿಗಳಲ್ಲಿ ನಾನೂ ಒಬ್ಬ. ಪ್ರತಿವಾರವೂ ವಿಶೇಷ ವಿಷಯಗಳೊಂದಿಗೆ ನಿಯತಕಾಲಿಕೆ ಹೊರತರುವುದು ಹೆಗ್ಗಳಿಕೆಯೇ ಸರಿ. ಜೊತೆಗೆ, ಇಲ್ಲಿ ಓದುಗರ ಅಭಿಪ್ರಾಯ, ಬರವಣಿಗೆಗೂ ಮನ್ನಣೆ ಕೊಡುವುದು ಸಂತಸದ ಸಂಗತಿ. ವಿವಿಧ ಅಭಿರುಚಿಯ ಜನರಿಗೆ ತಕ್ಕಂತೆ, ಮಕ್ಕಳಿಗೂ ಇಷ್ಟವಾಗುವಂತೆ ‘ಸುಧಾ’ ಇದ್ದಾಳೆ. ವಿದ್ಯಮಾನಗಳನ್ನು, ವೈಚಾರಿಕ ಲೇಖನಗಳನ್ನು, ಮನರಂಜನೆ ನೀಡುವ ಧಾರಾವಾಹಿ, ಕಥೆಗಳನ್ನು, ಮಾಹಿತಿಪೂರ್ಣ ಲೇಖನಗಳನ್ನು ನೀಡುತ್ತಿರುವುದು ಶ್ಲಾಘನೀಯ.

—ಎ.ಕೆ. ಅನಂತಮೂರ್ತಿ

## ಪ್ರಬಂಧದ ಅನುಬಂಧ
## ಯುಗಾದಿಯ ಸಂಬಂಧ



# ಸುಧಾ

## ಯುಗಾದಿ ವಿಶೇಷಾಂಕ-2024

ಎದೆಯ ಭಿತ್ತಿಯಲಿ ಪಿಸುಗುಡುತಿರುವ ಭಾವಝರಿ, ನೆನಪುಗಳ ನವಿಲುಗರಿ, ವಿಚಾರಗಳ ಒಳಸುರಿ – ಎಲ್ಲವೂ ಜೊತೆಗೂಡಿ ಹದವಾದ ಪ್ರಬಂಧವೊಂದು ನಿಮ್ಮೊಳಗೆ ಮಿಸುಕಾಡುತ್ತಿದೆಯೆ? ಎದೆ ತುಂಬಿಸಿಕೊಳ್ಳಲು ‘ಸುಧಾ ಯುಗಾದಿ ಸಂಚಿಕೆ 2024’ ಮೈಯೆಲ್ಲ ಕಣ್ಣಾಗಿದೆ, ತೆರೆದ ಬಾಹುಗಳಿಂದ ಹೊಸ ಪ್ರಬಂಧಗಳನ್ನು ಸ್ವಾಗತಿಸುತ್ತಿದೆ. ಪ್ರಬಂಧ ಪ್ರಕಾರದಲ್ಲಿ ಹೊಸ ಸಾಧ್ಯತೆ ಮತ್ತು ಪ್ರಯೋಗಗಳನ್ನು ಉತ್ತೇಜಿಸಲು ಈ ಸ್ಪರ್ಧೆ.

**ಒಂದನೇ ಬಹುಮಾನ: 15000**
**ಎರಡನೇ ಬಹುಮಾನ: 12000**
**ಮೂರನೇ ಬಹುಮಾನ: 10000**



- ಪ್ರಬಂಧಗಳು 2000 ಶಬ್ದ ಮೀರದಿರಲಿ.
- ಪ್ರಬಂಧಕ್ಕೆ ನಿರ್ದಿಷ್ಟ ವಸ್ತುವಿನ ಕಟ್ಟುಪಾಡಿಲ್ಲ. ಯಾವ ವಿಷಯದ ಬಗ್ಗೆಯಾದರೂ ಬರೆಯಬಹುದು.
- ಸ್ಪರ್ಧೆಗೆ ಕಳುಹಿಸುವ ಪ್ರಬಂಧಗಳು ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಜಾಲತಾಣ, ಸಾಮಾಜಿಕ ಜಾಲತಾಣ ಸೇರಿದಂತೆ ಯಾವುದೇ ಮಾಧ್ಯಮದಲ್ಲಿ ಪ್ರಕಟಗೊಂಡಿರಬಾರದು.
- ಬರಹದ ಜೊತೆ ಪ್ರತ್ಯೇಕ ಹಾಳೆಯಲ್ಲಿ ವಿಳಾಸ, ದೂರವಾಣಿ ಸಂಖ್ಯೆ, ಇಮೇಲ್ ವಿಳಾಸ ಬರೆಯಿರಿ. ಜೊತೆಗೆ ನಿಮ್ಮ ಫೋಟೊ ಕೂಡ ಇರಲಿ.
- ಲಕೋಟೆ ಮೇಲೆ ಅಥವಾ ಇಮೇಲ್‌ನಲ್ಲಿ ‘ಯುಗಾದಿ ಪ್ರಬಂಧ ಸ್ಪರ್ಧೆಗೆ’ ಎಂದು ನಮೂದಿಸಿ.
- ಬಹುಮಾನಿತ ರಚನೆಗಳನ್ನು ಯಾವಾಗ ಬೇಕಾದರೂ ಯಾವ ಸ್ವರೂಪದಲ್ಲಾದರೂ ಬಳಸುವ ಹಕ್ಕನ್ನು ‘ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್’ ಕಾದಿರಿಸಿಕೊಂಡಿದೆ.
- ‘ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್’ ಸಿಬ್ಬಂದಿ ಮತ್ತು ಅವರ ಕುಟುಂಬ ವರ್ಗದವರು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.
- ನುಡಿ–ಯುನಿಕೋಡ್‌ನಲ್ಲಿ ಪ್ರಬಂಧಗಳನ್ನು ಇಮೇಲ್ ಮಾಡಬಹುದು.

**ಕೊನೆಯ ದಿನಾಂಕ**
**ಫೆಬ್ರುವರಿ 10, 2024**

**ವಿಳಾಸ:**
ಸಂಪಾದಕರು
ಸುಧಾ ಯುಗಾದಿ ವಿಶೇಷಾಂಕ
ನಂ. 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು 560001

ಇಮೇಲ್: **ugadi@sudha.co.in**